ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	82 (170)
ಸದಸ್ಯರ ಹೆಸರು	:	ಶ್ರೀ ಅರವಿಂದಕುಮಾರ್ ಅರಳಿ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	16-02-2022.
ಉತ್ತರಿಸುವ ಸಚಿವರು	:	ಮಾನ್ಯ ಮುಜರಾಯಿ, ಹಜ್ ಮತ್ತು ವಕ್ಫ್ ಸಚಿವರು.

ಪ್ರಶ್ನೆಗಳು	ಉತ್ತರಗಳು
ಬೀದರ್ ಜಿಲ್ಲೆಯ ವಕ್ಫ್ ಆಸ್ತಿಗೆ ಸೇರಿದ ಕಮಠಾಣ ಹೋಬಳಿ ಚಿದ್ರಿ ಗ್ರಾಮದ ಸರ್ವೆ ನಂ. 15/*1ಸಿ/1 ರ ಜಮೀನು ಭೂ ಪರಿವರ್ತನೆ ಆಗಿರುವುದು ಹೇಗೆ ಮತ್ತು ಅದನ್ನು ನಿವೇಶನ ಮಾಡಿ ಮಾರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:	ಬೀದರ್ ಜಿಲ್ಲೆ ಚಿದ್ರಿ ಗ್ರಾಮದ ಸ.ನಂ.15/1 ವಿಸ್ತೀರ್ಣ 114' x 20' ವಕ್ಫ್ ಆಸ್ತಿ ಎಂದು ವಕ್ಫ್ ಮಂಡಳಿಯ ಅಧಿಸೂಚನೆ ದಿನಾಂಕ: 09-03-1972 ದಿನಾಂಕ: 30-08-1973 ರಲ್ಲಿ ಕ್ರ.ಸಂ.687 ರಲ್ಲಿ ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿರುತ್ತದೆ. ಈ ಸಂಸ್ಥೆಗೆ ಸೇರಿದ "ಕಿತಾಬುಲ್ ಔಕಾಫ್" ಪ್ರಕಾರ 188ಎ-10ಗುಂ ಜಮೀನು ಇನಾಂ ಆಸ್ತಿಯಾಗಿದ್ದು ಇದರಲ್ಲಿ 27ಎ-00ಗುಂ ಜಮೀನು ಮುನ್‌ತಖಬ್ ಹಾಗೂ ಸುತ್ತೋಲೆ ಸಂಖ್ಯೆ: 36 ಫಾಸ್ಲಿ 1299 ಪ್ರಕಾರ ದರ್ಗಾ:ದ ಸೇವೆಗಾಗಿ ಮೀಸಲಿಡಲಾಗಿತ್ತು. ಆದರೆ ಜಿಲ್ಲಾಧಿಕಾರಿ, ಇನಾಂ ರದ್ದಿಯಾತಿ ರವರ ಆದೇಶ ಸಂಖ್ಯೆ: SDINM/408/REG/B, ದಿನಾಂಕ: 18-05-1964ರ ಅನ್ವಯ ಚಿದ್ರಿ ಗ್ರಾಮದ ಸ. ನಂ.102, ಸ. ನಂ.103 & ಸ. ನಂ.15ರ ಇನಾಂ ರದ್ದಾಗಿ ಸ್ವಾಧೀನದಲ್ಲಿರುವ ಇನಾಂದಾರರ ಹೆಸರಿಗೆ ಮಂಜೂರಾತಿಯಾಗಿರುತ್ತದೆ. ತದನಂತರ ಈ ಜಮೀನಿನಲ್ಲಿ 60ಎ-00ಗುಂ ಪ್ರದೇಶ ವಾಯುನೆಲೆಗಾಗಿ ಭೂಸ್ವಾಧೀನವಾಗಿ ಹಾಗೂ ಭೂಸುಧಾರಣೆ ಕಾಯ್ದೆ ಪ್ರಕಾರ ಅಧಿಭೋಗದಾರಿಕೆ ಹಕ್ಕನ್ನು ಮಂಜೂರು ಮಾಡಲಾಗಿರುತ್ತದೆ. ಚಿದ್ರಿ ಗ್ರಾಮದ ಸ.ನಂ.15ಕ್ಕೆ ಸಂಬಂಧಿಸಿದಂತೆ ಹಾಲಿ ಇರುವ ಪಹಣಿಯ ಪ್ರಕಾರ 27 ಹಿಸ್ಸಾಗಳಾಗಿದ್ದು ಒಟ್ಟು 143 ಎಕರೆ ಪ್ರದೇಶವಿದ್ದು ಕಾಲಂ ನಂ.9 ರಲ್ಲಿ ಇತರೆಯವರ ಹೆಸರುಗಳು ಇರುತ್ತವೆ. ವಕ್ಫ್ (ತಿದ್ದುಪಡಿ) ಕಾಯ್ದೆ, 2013ರ ಕಲಂ 104-ಎ ಪ್ರಕಾರ ವಕ್ಫ್ ಆಸ್ತಿಯ ಪರಭಾರೆ ಹಿಂದಿನಿಂದಲೂ ನಿರರ್ಥಕವಾಗುವುದೆಂದಿದೆ. ಅಂದಿನ ಇನಾಂ ಜಿಲ್ಲಾಧಿಕಾರಿಗಳು ದಿನಾಂಕ: 18-05-1964 ರಲ್ಲಿ

	ನೀಡಿರುವ ಆದೇಶಕ್ಕೆ ಮೇಲ್ಮನವಿ ಸಲ್ಲಿಸಲು ಲಿಮಿಟೇಶನ್ ಹಾಗೂ ಅನ್ಯಯ ಅವಕಾಶ ಇಲ್ಲದೇ ಇರುವುದರಿಂದ ಮಂಡಳಿಯಿಂದ ಮೇಲ್ಮನವಿ ಸಲ್ಲಿಸಲಾಗಿರುವುದಿಲ್ಲ. ಸದರಿ ಸರ್ವೆ ನಂಬರಿನಲ್ಲಿ ಹಾಲಿ ಇರುವ ಪಹಣಿಯ ಪ್ರಕಾರ 27 ನಿವೇಶನಗಳಾಗಿ ಕಾಲಂ ನಂ.9 ರಲ್ಲಿ ಖರೀದಿಸಿರುವವರ ಹೆಸರು ಇರುತ್ತದೆ.
ಇದರಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು;	ವಕ್ಫ್ ಸಂಸ್ಥೆಯ ಹೆಸರಿನಲ್ಲಿ ಜಮೀನಿನ ಖಾತೆ ಇಲ್ಲದೇ ಇರುವುದರಿಂದ ಸಂಸ್ಥೆ ಅಥವಾ ವಕ್ಫ್ ಮಂಡಳಿಯಿಂದ ಯಾವುದೇ ಕ್ರಮ ಜರುಗಿಸಿರುವುದಿಲ್ಲ.
ವಕ್ಫ್ ಆಸ್ತಿಯ ಸಂರಕ್ಷಣೆ ಮಾಡುವ ಹೊಣೆ ವಕ್ಫ್ ಸಂಸ್ಥೆಯದ್ದಾದರೆ ಈ ಆಸ್ತಿಯನ್ನು ಹೇಗೆ ಭೂ ಪರಿವರ್ತನೆ ಮಾಡಿ ನಿವೇಶನಗಳಾಗಿ ಮಾರಾಟ ಮಾಡಲಾಗುತ್ತಿದೆ;	ವಕ್ಫ್ ಸಂಸ್ಥೆಯ ಹೆಸರಿನಲ್ಲಿ ಜಮೀನಿನ ಖಾತೆ ಇಲ್ಲದೇ ಇರುವುದರಿಂದ ಸಂಸ್ಥೆ ಅಥವಾ ವಕ್ಫ್ ಮಂಡಳಿಯಿಂದ ಯಾವುದೇ ಕ್ರಮ ಜರುಗಿಸಿರುವುದಿಲ್ಲ.
ಆಸ್ತಿಯನ್ನು ಮಾರಾಟ ಮಾಡುತ್ತಿರುವವರ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮವೇನು?	ವಕ್ಫ್ ಸಂಸ್ಥೆಯ ಹೆಸರಿನಲ್ಲಿ ಜಮೀನಿನ ಖಾತೆ ಇಲ್ಲದೇ ಇರುವುದರಿಂದ ಸಂಸ್ಥೆ ಅಥವಾ ವಕ್ಫ್ ಮಂಡಳಿಯಿಂದ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

ಸಂಖ್ಯೆ: MWD 05 LMQ 2022

(ಶಶಿಕಲಾ ಅ.ಜೊಲ್ಲೆ)
ಮುಜರಾಯಿ, ಹಜ್
ಮತ್ತು ವಕ್ಫ್ ಸಚಿವರು.